ಕಥೆ





ಮೂಲ: ಎಂ.ಟಿ. ವಾಸುದೇವನ್ ನಾಯರ್
ಕನ್ನಡಕ್ಕೆ: ಮೋಹನ ಕುಂಟಾರ್
ಕಲೆ: ಸಂತೋಷ್ ಸಸಿಹಿತ್ಲು

# ಹಸಿವಿಲ್ಲದ ದೈವಗಳು



ಸಿಟ್ಟಿನಿಂದ ನಾಣುವಿನ ಕಣ್ಣುಗಳು ಕೆಂಪಾದವು. ಹೇಗೆ ಸಿಟ್ಟು ಬಾರದಿದ್ದೀತು? ಬಿಲ್ವಕಟ್ಟೆ ಅಪವಿತ್ರವಾಗಿದೆ! ಪುಣ್ಯಸ್ಥಳವಾದ ಬಿಲ್ವಕಟ್ಟೆ ಮೇಲೆ ನೆರೆ ಮನೆಯ ಮೂಸಾಹಾಜಿಯ ಮೇಕೆ ಮತ್ತು ಮರಿಗಳು ವಿಶ್ರಾಂತಿ ತೆಗೆದುಕೊಳ್ಳುವುದನ್ನು ಅವನು ಕಂಡಿದ್ದ. ಅಷ್ಟೇ ಅಲ್ಲ, ಪವಿತ್ರವಾದ ಆ ನೆಲದಲ್ಲಿ ಆಡು ಮಲಮೂತ್ರ ವಿಸರ್ಜನೆಯನ್ನು ಮಾಡಿದೆ.

ಅಲ್ಲಿ ಸಣ್ಣದೊಂದು ಕ್ರಾಂತಿಯೇ ನಡೆದಿದೆ. ಆಡಿಗೆ ಒಂದು ಏಟು, ಯಜಮಾನನಿಗೆ ಬೈಗಳು. ಲಕ್ಷ್ಮಿಯ ನಿರ್ಲಕ್ಷ್ಯಕ್ಕೆ ಶಿಕ್ಷೆಯಾಗಿ ಅವಳಿಗೂ ಒಂದು ಏಟು-ಎಲ್ಲವೂ ಅದರ ಪರಿಣಾಮ. 'ಪುಣ್ಯಾಹಂ' ಜಲ ಸಿಂಪಡಿಸಿ ಶುದ್ಧೀಕರಣ ಮಾಡಿದ್ದಕ್ಕಾಗಿ ಪುರೋಹಿತ ಕೃಷ್ಣನೆಂಬ್ರಾಂದ್ರಿಗೆ ಅಂದು ನಾಲ್ಕಾಣೆ ದಕ್ಷಿಣೆಯೂ ಸಿಕ್ಕಿತು.

ಸಾಯಂಕಾಲ ಬಿಲ್ವಕಟ್ಟೆಯಲ್ಲಿ ದೀಪ ಹಚ್ಚಿ, ಕರ್ಪೂರ ಉರಿಸಿ ನಮಸ್ಕರಿಸಿದ ಬಳಿಕವೇ ನಾಣುವಿನ ಮನಸ್ಸು ಸ್ಥಿಮಿತಕ್ಕೆ ಬಂದುದು.

ಜೆಂಬಿಟ್ಟಿಗೆಯಲ್ಲಿ ಕಟ್ಟಿದ ಕಟ್ಟೆ ಅದರ ನಡುವೆ